| | | | | |
|---|---|---|---|---|
| 9. | 100 | **ಲೆಕ್ಕಪರಿಶೋಧನೆ :**<br>(1) ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂತಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರುಪಡಿಸಲು ವ್ಯವಸ್ಥೆ ಮಾಡತಕ್ಕದ್ದು. ಪ್ರತಿ ವರ್ಷ ಸಹಕಾರ ಲೆಕ್ಕಪರಿಶೋಧಕ ನಿರ್ದೇಶಕನು ಪ್ರಕಟಿಸುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧನಾ ಫರ್ಮುಗಳ ತಂಡದ ಪಟ್ಟಿಯಿಂದ ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು.<br>(3) ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟಂಬರ್ 1ನೇ ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸೇರ್ಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟಂಬರ್ ತಿಂಗಳ 25ನೇ ದಿನ ದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.<br>(5) ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧನಾ ನಿರ್ದೇಶಕನಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗಸೂಚಿಗಳನುಸಾರವಾಗಿ ಬ್ಯಾಂಕಿನ ದುಡಿಯುವ ಬಂಡವಾಳ ಮತ್ತು ವಹಿವಾಟಿನ ಆಧಾರದ ಮೇಲೆ ಲೆಕ್ಕಪರಿಶೋಧಕನ ಸೇವೆಗಳಿಗೆ ನೀಡಬಹುದಾದ ಸಂಭಾವನೆಯನ್ನು ನಿರ್ಧರಿಸತಕ್ಕದ್ದು. | **ಲೆಕ್ಕಪರಿಶೋಧನೆ :**<br>(1) ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂಥಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರುಪಡಿಸಲು ವ್ಯವಸ್ಥೆ ಮಾಡತಕ್ಕದ್ದು. ಪ್ರತಿ ವರ್ಷ ಭಾರತೀಯ ರಿಜರ್ವ್ ಬ್ಯಾಂಕು ಅನುಮೋದಿಸಿ ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು.<br>(3) ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಜೂನ್ 30ನೇ ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸೇರ್ಪಡಿಸಲುತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟಂಬರ್ ತಿಂಗಳ 25ನೇ ದಿನ ದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.<br>(5) ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧನಾ ನಿರ್ದೇಶಕನಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗಸೂಚಿಗಳನುಸಾರವಾಗಿ ಲೆಕ್ಕಪರಿಶೋಧಕನ ಸೇವೆಗಳಿಗೆ ನೀಡಬಹುದಾದ ಸಂಭಾವನೆಯನ್ನು ನಿರ್ಧರಿಸತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |

**ಮುಖ್ಯಕಾರ್ಯನಿರ್ವಾಹಕರ ಸಹಿ** **ಸಮಿತಿಯ ಸದಸ್ಯರು–1** **ಸಮಿತಿಯ ಸದಸ್ಯರು–2** **ಅಧ್ಯಕ್ಷರ ಸಹಿ**



**ಸ್ಥಾಪನೆ : 6-10-1981**

ತೆರೆದ - ಅಂಚೆ

ರಿ.ನಂ.ಎ.ಆರ್.ಟಿ./ಸಿ./ಎಂ.ಕೆ.ಟಿ./ಆರ್.ಜಿ.ಡಿ./ 7999/81-82

ನಂ.ಎ.ಆರ್-32/ತಿದ್ದುಪಡಿ/21/1997-98

ಆಡಳಿತ ಕಛೇರಿ : ಆರ್.ಬಿ.ಐ. ಲೈಸೆನ್ಸ್ ನಂ. : UBD/KAN/1736P/13-07-99

ಮಂಡಿಪೇಟೆ ಶಾಖೆ : ಆರ್.ಬಿ.ಐ. ಲೈಸೆನ್ಸ್ ನಂ. UBD/BG/BL629/21-02-2013

# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ

**ಆಡಳಿತ ಕಛೇರಿ : 8ನೇ ಮುಖ್ಯರಸ್ತೆ, ಅಶೋಕನಗರ, ತುಮಕೂರು- 572 103.**

ದೂರವಾಣಿ : 2272615, 2955801, 4014428, ಮಂಡಿಪೇಟೆ ಶಾಖೆ : 2955844

Email : parshwanathatumkur.2008@rediffmail.com spsbn@parshwanathabank.com

website : www.parshwanathabank.com

45th

2025-2026 ನೇ ಸಾಲಿನ

# 45 ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

**ದಿನಾಂಕ : 30-08-2026, ಭಾನುವಾರ ಬೆಳಗ್ಗೆ 10-30 ಗಂಟೆಗೆ**

**ಸ್ಥಳ : ಮಹಾವೀರ ಭವನ**

ಮಹಾವೀರ ರಸ್ತೆ, ( ರೈಲ್ವೆ ಸ್ಟೇಷನ್ ರಸ್ತೆ ) ತುಮಕೂರು.

ಶ್ರೀಮತಿ / ಶ್ರೀ

ಅಂಚೆ ಸ್ವೀಕೃತಿ ಪಡೆದಿದೆ

## • ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು •

1. ಪ್ರಾರ್ಥನೆ
2. ದಿವಂಗತ ಸದಸ್ಯರುಗಳಿಗೆ ಶ್ರದ್ಧಾಂಜಲಿ.
3. ಸ್ವಾಗತ
4. 45ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ ಓದಿ ಅಂಗೀಕರಿಸುವುದು.
5. ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
6. 2025–2026ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ ಅಂಗೀಕರಿಸುವುದು.
7. 2025–2026ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಸಮಾಧಾನಗಳನ್ನು ಓದಿ ಅಂಗೀಕರಿಸುವುದು.
8. 2025–2026ನೇ ಸಾಲಿನ ಲಾಭ ವಿಲೇವಾರಿ ಮಾಡಿರುವುದನ್ನು ಮಂಡಿಸುವುದು ಮತ್ತು ಅಂಗೀಕರಿಸುವುದು.
9. 2026–2027ನೇ ಸಾಲಿನ ಮುಂಗಡ ಪತ್ರ (ಬಡ್ಜೆಟ್) ಮಂಡನೆ ಮತ್ತು ಅನುಮೋದನೆ ಮಾಡುವುದು.
10. 2026–2027ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆಯಂತೆ ನೇಮಿಸುವುದು.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12. ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿ ಅನುಮೋದನೆ.
13. ಬೈಲಾ (ಉಪವಿಧಿ) ತಿದ್ದುಪಡಿ
14. ಬ್ಯಾಂಕಿನ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ.
15. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.
16. ಅಧ್ಯಕ್ಷರ ಭಾಷಣ. 17. ವಂದನಾರ್ಪಣೆ.

## • ಸೂಚನೆಗಳು •

1. ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳಿದ್ದಲ್ಲಿ ದಿನಾಂಕ : 24–08–2026 ರ ಒಳಗೆ ಲಿಖಿತ ಮೂಲಕ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ತಲುಪಿಸಬಹುದು.
2. ಕಡಿಮೆ ಷೇರುಗಳಿರುವ ಹಾಲಿ ಸದಸ್ಯರು ಹೆಚ್ಚುವರಿ ಷೇರುಗಳನ್ನು ಪಡೆಯಲು ಸೂಚಿಸಿದೆ. (ರೂ 50/– ಮುಖಬೆಲೆಯ ಷೇರುಗಳಿರುವ (1 ಷೇರು) ಸದಸ್ಯರುಗಳಿಗೆ ಇದು ಕಡ್ಡಾಯವಾಗಿರುತ್ತದೆ.) ಷೇರು ಮುಖ ಬೆಲೆ ಪ್ರತಿ ಷೇರಿಗೆ ರೂ. 100/– ರೂಗಳಿಗೆ ಹೆಚ್ಚಿಸಲಾಗಿದ್ದು ಕನಿಷ್ಠ ರೂ. 1,000/– ಇರಬೇಕಾಗಿರುತ್ತದೆ. ತಪ್ಪಿದ್ದಲ್ಲಿ ಅಂತಹ ಸದಸ್ಯರು ವಾರ್ಷಿಕ ಮಹಾಸಭೆ / ಚುನಾವಣೆಯಲ್ಲಿ ಸ್ಪರ್ಧಿಸುವ / ಮತ ಚಲಾಯಿಸುವ ಹಕ್ಕು ಇರುವುದಿಲ್ಲ.
3. **ಸದಸ್ಯರ ವಿಳಾಸ ಬದಲಾಗಿದ್ದಲ್ಲಿ, ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ಸೂಕ್ತ ಪುರಾವೆಯೊಂದಿಗೆ ಬ್ಯಾಂಕಿಗೆ ಸಲ್ಲಿಸಲು ಕೋರಿದೆ.**
4. **ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ದೈವಾಧೀನರಾಗಿರುವುದರಿಂದ ಅವರಿಗೆ ಸಂಬಂಧ ಪಟ್ಟ ವಾರಸುದಾರರು ಸೂಕ್ತ ದಾಖಲೆಗಳನ್ನು ಒದಗಿಸಿ ಮೃತರ ಹೆಸರಿನಲ್ಲಿರುವ ಷೇರು ಹಣ ಪಡೆಯಬೇಕೆಂದು ಕೋರಿದೆ.**
5. **ಸದಸ್ಯರ ಇಮೇಲ್ ವಿಳಾಸ, ಹಾಗೂ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿನಲ್ಲಿ ರಿಜಿಸ್ಟರ್ ಮಾಡಿಸಿದಲ್ಲಿ, ಬ್ಯಾಂಕಿನ ಮಾಹಿತಿಯನ್ನು ತಮಗೆ ತಲುಪಿಸಲು ಅನುಕೂಲವಾಗುತ್ತದೆ. ಎಸ್.ಎಂ.ಎಸ್. ಮೂಲಕ ತಮ್ಮ ಖಾತೆಯ ವಿವರಗಳನ್ನು ಪಡೆಯಬಹುದು. ಠೇವಣಿದಾರರು ಪಾನ್‌ಕಾರ್ಡ್ ಜೆರಾಕ್ಸ್ ಹಾಗೂ 15ಜಿ/ 15 ಹೆಚ್ ನೀಡಬೇಕಾಗಿ ವಿನಂತಿ. ಅದೇ ರೀತಿ ಆಧಾರ್ ಸಂಖ್ಯೆಯೊಂದಿಗೆ ಪಾನ್ ಸಂಖ್ಯೆಯನ್ನು ಜೋಡಣೆ ಮಾಡುವುದು ಖಡ್ಡಾಯ.**
6. ಆರ್.ಬಿ.ಐ. ಸುತ್ತೋಲೆಯನ್ವಯ ಕೆ.ವೈ.ಸಿ. ನಿರ್ದೇಶನದಂತೆ ತಮ್ಮ ಇತ್ತೀಚಿನ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಾನ್‌ಕಾರ್ಡ್ ಮತ್ತು ಭಾವಚಿತ್ರ ಹಾಗೂ ವಿಳಾಸದ ಪುರಾವೆಗಳನ್ನು ಬ್ಯಾಂಕಿಗೆ ನೀಡಲು ಸೂಚಿಸಿದೆ.

**ಉಪಹಾರ : ಬೆಳಗ್ಗೆ 8–00 ರಿಂದ 9–30 ಗಂಟೆಯವರೆಗೆ ಭೋಜನ : ಮಧ್ಯಾಹ್ನ 1–00 ಗಂಟೆಗೆ**



| | | | | |
|---|---|---|---|---|
| | | ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು.<br>(2) ಮಂಡಳಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ ನಾಮನಿರ್ದೇಶನ ಮಾಡುವ ಮೂಲಕ ಮಂಡಳಿಯಲ್ಲಿನ ಖಾಲಿ ಸ್ಥಾನವನ್ನು ಮಂಡಳಿಯು ಮೂರು ತಿಂಗಳ ಒಳಗಾಗಿ ಭರ್ತಿ ಮಾಡಬಹುದು. ತಪ್ಪಿದಲ್ಲಿ ನಿಬಂಧಕರು ಅಂತಹ ಖಾಲಿ ಸ್ಥಾನಗಳನ್ನು ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು. | | |
| 7. | 62 | **ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು :**<br>3) ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–<br>ಕೆ) ಲೆಕ್ಕಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿವರ್ಷ ಸೆಪ್ಟಂಬರ್ 1ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು;<br>(ಎಓ) ಮಂಡಳಿಯ ಉಳಿದ ಅವಧಿಯು ಅದರ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಇದ್ದಾಗ, ಮಂಡಳಿಯಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು | **ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು :**<br>3) ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–<br>ಕೆ) ಲೆಕ್ಕಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಜೂನ್ 30ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು;<br>(ಎಓ) ಮಂಡಳಿಯಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |
| 8. | 66 | **ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :**<br>ಮಂಡಳಿಯು ಮುಖ್ಯಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು;<br>ಅವನು;<br>(12) ಸಾಮಾನ್ಯ ಚುನಾವಣೆ ಆಗಿ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ, ಸಹಕಾರ ಚುನಾವಣಾ ಆಯೋಗವು ನಿಗದಿಪಡಿಸಿದಂತೆ, ಪದಾಧಿಕಾರಿಗಳ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು | **ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:**<br>ಮಂಡಳಿಯು ಮುಖ್ಯಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು;<br>ಅವನು;<br>(12) ಸಾಮಾನ್ಯ ಚುನಾವಣೆ ಆಗಿ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಪದಾಧಿಕಾರಿಗಳ ಚುನಾವಣೆಗಾಗಿ ಮಂಡಲಿಯ ಸಭೆಯನ್ನುಕರೆಯತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |

| | | | | |
|---|---|---|---|---|
| | | ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | | |
| 5. | 53 | **ಪದಾಧಿಕಾರಿಗಳ ಚುನಾವಣೆ :**<br>(2) ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ, ಇದ್ದಲ್ಲಿ, ಚುನಾವಣೆಗಳನ್ನು ನಡೆಸುವಂತೆ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.<br>(3) ಬ್ಯಾಂಕಿನ ಯಾರೇ ಪದಾಧಿಕಾರಿಯ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳುವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಬ್ಯಾಂಕಿನ ಮಂಡಲಿಯು ಸಹಕಾರಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು<br>(4)<br><br>(i)<br>ಹಾಲಿ ಇರುವುದಿಲ್ಲ. | ಪದಾಧಿಕಾರಿಗಳ ಚುನಾವಣೆ :<br>(2) ಮುಖ್ಯಕಾರ್ಯನಿರ್ವಾಹಕನು ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು.<br>(3) ಅಳಿಸಲಾಗಿದೆ.<br><br>(4) ಅವಿಶ್ವಾಸ ನಿರ್ಣಯ :<br>ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು.<br>(i) ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಬ್ಯಾಂಕಿನ ವೃತ್ತಿಪರ ನಿರ್ದೇಶಕ ಅವಿಶ್ವಾಸ ನಿರ್ಣಯದ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |
| 6. | 58 | **ಮಂಡಲಿಯ ತೆರವಾದ ಸ್ಥಾನಗಳು :**<br>ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ಯಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಕೆಳಗಿನಂತೆ ಭರ್ತಿ ಮಾಡತಕ್ಕದ್ದು.<br>(1) ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ | **ಮಂಡಲಿಯ ತೆರವಾದ ಸ್ಥಾನಗಳು :**<br>ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದು ಹಾಕುವಿಕೆ, ಅನರ್ಹತೆ ಅಥವಾ ಇನ್ಯಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ ನಾಮನಿರ್ದೇಶನ (ಕೋ–ಆಪ್ಷನ್) ಮಾಡುವ ಮೂಲಕ ಮಂಡಲಿಯು ಭರ್ತಿಮಾಡತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |



# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ : 8ನೇ ಮುಖ್ಯರಸ್ತೆ, ಅಶೋಕನಗರ, ತುಮಕೂರು- 572 103.
ದೂರವಾಣಿ : 2272615, 2955801, 4014428, ಮಂಡಿಪೇಟೆ ಶಾಖೆ : 2955844

## 2025- 2026 ನೇ ಸಾಲಿನ 45ನೇ ವಾರ್ಷಿಕ ಸಾಮಾನ್ಯ ಸಭೆಯ

### ಆಹ್ವಾನ ಪತ್ರಿಕೆ

**ದಿನಾಂಕ : 30-08-2026, ಭಾನುವಾರ ಬೆಳಗ್ಗೆ 10-30 ಗಂಟೆಗೆ**

ತುಮಕೂರಿನ ಮಹಾವೀರ ರಸ್ತೆಯಲ್ಲಿರುವ (ರೈಲ್ವೆ ಸ್ಟೇಷನ್ ರಸ್ತೆ)

**ಮಹಾವೀರ ಭವನ** ದ ಸಭಾಂಗಣದಲ್ಲಿ

**2025-2026 ನೇ ಸಾಲಿನ 45ನೇ ವಾರ್ಷಿಕ ಸಾಮಾನ್ಯ ಸಭೆಯನ್ನು**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಬಿ.ವಿ. ರಾಜೇಂದ್ರಕುಮಾರ್**

ಇವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇವೆ.

ದಿನಾಂಕ : 30-07-2026

ಸ್ಥಳ : ತುಮಕೂರು.

ಕಾರ್ಯಕಾರಿ ಮಂಡಳಿ ಆದೇಶದ ಮೇರೆಗೆ

**ಜ್ವಾಲಾ ಪ್ರಸಾದ್**

ಮುಖ್ಯಕಾರ್ಯನಿರ್ವಹಣಾಧಿಕಾರಿಗಳು

**ಕಾರ್ಯಕಾರಿ ಮಂಡಳಿ**

**ಶ್ರೀ ಬಿ.ವಿ. ರಾಜೇಂದ್ರಕುಮಾರ್**
ಅಧ್ಯಕ್ಷರು

**ಶ್ರೀ ವಿ. ಸುನಿಲ್‌ಕುಮಾರ್**
ಉಪಾಧ್ಯಕ್ಷರು

**ನಿರ್ದೇಶಕರು**

| | | |
|---|---|---|
| ಶ್ರೀ ಪ್ರದೀಪ್ ಬಿ.ಕೆ. | ಶ್ರೀ ರಾಕೇಶ್ ಕುಮಾರ್ ಹೆಚ್.ಜೆ. | ಶ್ರೀ ಅಭಯಕುಮಾರ್ ಎ.ಜೆ. |
| ಶ್ರೀ ಅರುಣ್‌ಕುಮಾರ್ ಜೈನ್ ಸಿ. | ಶ್ರೀ ರಾಜಣ್ಣ ಹೆಚ್.ವಿ | ಶ್ರೀ ಜಿನೇಶ್ ಎಸ್.ಡಿ. |
| ಶ್ರೀ ಸಂತೋಷ್ ಎ. | ಶ್ರೀ ದೇವೇಂದ್ರನಾಥ್ ಎಲ್. | ಶ್ರೀಮತಿ ಸುಜಾತ ಸುಮತಿಕುಮಾರ್ |
| ಶ್ರೀ ಮಹಾವೀರ್ ಜೈನ್ | ಶ್ರೀ ಬ್ರಹ್ಮಪ್ರಕಾಶ್ ಎ.ವೈ. | ಶ್ರೀಮತಿ ಮಾನಸ .ಪಿ |

## ಠೇವಣಿಗಳ ಮೇಲಿನ ಆಕರ್ಷಕ ಬಡ್ಡಿದರ

| | |
|---|---|
| 31 ದಿನಗಳಿಂದ 90 ದಿನಗಳವರೆಗೆ | 4.00% |
| 91 ದಿನಗಳಿಂದ 180 ದಿನಗಳವರೆಗೆ | 4.50% |
| 181 ದಿನಗಳಿಂದ 1 ವರ್ಷದವರೆಗೆ | 5.50% |
| 1 ವರ್ಷ ಮೇಲ್ಪಟ್ಟು 2 ವರ್ಷದವರೆಗೆ | 6.00% |
| 2 ವರ್ಷ ಮೇಲ್ಪಟ್ಟು 3 ವರ್ಷದವರೆಗೆ | 6.50% |
| 3 ವರ್ಷ ಮೇಲ್ಪಟ್ಟು 5 ವರ್ಷದವರೆಗೆ | 7.50%* |

ಉಳಿತಾಯ ಖಾತೆಗೆ ಶೇ. 3.00% ಬಡ್ಡಿದರದಲ್ಲಿ ದಿನದ ಬಾಕಿ ಲೆಕ್ಕಕ್ಕೆ ಬಡ್ಡಿ ನೀಡಲಾಗುವುದು

ಸೂಚನೆ: ಹಿರಿಯ ನಾಗರಿಕರಿಗೆ (60 ವರ್ಷ ಮೇಲ್ಪಟ್ಟು) ಶೇ. 0.50% ಬಡ್ಡಿ ಹೆಚ್ಚಿಗೆ ನೀಡಲಾಗುವುದು **8.00%***

**ಸೇಫ್ ಲಾಕರ್ ಸೌಲಭ್ಯ ದೊರೆಯುತ್ತದೆ.**

## ಸಾಲಗಳ ಮೇಲಿನ ಆಕರ್ಷಕ ಬಡ್ಡಿದರ

| | |
|---|---|
| ಸ್ಥಿರಾಸ್ತಿ ಆಧಾರದ ಸಾಲ – ಕಟ್ಟಡ ಮತ್ತು ನಿವೇಶನ | 10.50% |
| ಸ್ಥಿರಾಸ್ತಿ ಆಧಾರದ ಸಾಲ – ಗೃಹ ನಿರ್ಮಾಣ | 9.00% |
| ವಾಹನ ಸಾಲ – ಹೊಸ ವಾಹನ ಖರೀದಿ | 10.00% |
| ವಾಹನ ಸಾಲ – ಹಳೆಯ ವಾಹನದ ಮೇಲೆ | 12.00% |
| ಯಂತ್ರಾಧಾರ ಸಾಲ | 11.00% |
| ಮೀರಳತೆಯ ಸಾಲ | 11.00% |
| ಅಡಮಾನ ಸಾಲ | 10.00% |
| ಚಿನ್ನಾಭರಣ ಸಾಲ | 9.00% |
| ಜಂಟಿ ಸಾಲ | 15.00% |

**(ವಿಶೇಷ ಸೂಚನೆ :)**

1. ಸಾಮಾನ್ಯ ಸಭೆಗೆ ಆಹ್ವಾನ ಪತ್ರಿಕೆಯನ್ನು ತಪ್ಪದೇ ತರುವುದು ಅಥವಾ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು.
2. ಗುರುತಿನ ಚೀಟಿ ಪಡೆಯದ ಮಾನ್ಯ ಸದಸ್ಯರೆಲ್ಲರೂ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ 2 ಭಾವಚಿತ್ರಗಳನ್ನು ಕೊಟ್ಟು ಬ್ಯಾಂಕಿನ ಗುರುತಿನ ಚೀಟಿ ಪಡೆಯುವುದು.
3. ಬ್ಯಾಂಕಿನ ಸದಸ್ಯರು ಹಿಂದಿನ 5 ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಕನಿಷ್ಠ 2 ಸಹಕಾರ ವರ್ಷಗಳಿಗಾಗಿ ಬ್ಯಾಂಕಿನ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದಂತೆ ಬ್ಯಾಂಕ್ ದೊರಕಿಸಿ ಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂತಹ ಸದಸ್ಯರು ಸಾಮಾನ್ಯ ಸಭೆ ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರುವುದಿಲ್ಲ.
4. ಸಾಲ ಪಡೆದು ಸುಸ್ತಿದಾರರಾಗಿದ್ದಲ್ಲಿ, ವಾರ್ಷಿಕ ಸಾಮಾನ್ಯ ಸಭೆಗೆ 20 ದಿನ ಮುಂಚಿತವಾಗಿ ಪಾವತಿಯಾಗಬೇಕಾದ ಸಾಲದ ಕಂತನ್ನು ಪಾವತಿಸುವುದು, ತಪ್ಪಿದ್ದಲ್ಲಿ ಅಂತಹ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.
5. 2025-2026 ನೇ ಸಾಲಿನ ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿಯನ್ನು ಆಡಳಿತ ಕಛೇರಿಯ ಕೆಲಸದ ವೇಳೆಯಲ್ಲಿ ದಿನಾಂಕ : 19-08-2026 ರಿಂದ ನೀಡಲಾಗುವುದು ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಇ-ಮೇಲ್ ವಿಳಾಸ ನೀಡಿದ ಸದಸ್ಯರಿಗೆ Soft Copy ಮುಖಾಂತರ ಕಳುಹಿಸಲಾಗುವುದು ಹಾಗೂ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ವರದಿಯನ್ನು ಪ್ರಕಟಿಸಲಾಗಿದೆ.
6. 2025-2026 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸದಸ್ಯರುಗಳ 3 (ಮೂರು) ಮಕ್ಕಳಿಗೆ ಬ್ಯಾಂಕಿನ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಗುವುದು.
   ಲಿಖಿತ ಅರ್ಜಿಯೊಂದಿಗೆ 1 ಪಾಸ್‌ಪೋರ್ಟ್ ಸೈಜಿನ ಫೋಟೋ ಮತ್ತು ದೃಢೀಕರಣದ ಅಂಕಪಟ್ಟಿಯೊಂದಿಗೆ ಲಗತ್ತಿಸಿ, ಬ್ಯಾಂಕಿನ ವ್ಯವಸ್ಥಾಪಕರಿಗೆ ದಿನಾಂಕ : 25-08-2026 ರೊಳಗಾಗಿ ಸಲ್ಲಿಸುವುದು.



**ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ**

**ಬ್ಯಾಂಕಿನ ಉಪವಿಧಿ (ಬೈಲಾ)ತಿದ್ದುಪಡಿಗಳು**

| ಕ್ರ. ಸಂ. | ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 1. | 3 | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :** ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯು ತುಮಕೂರು ಜಿಲ್ಲಾ ವ್ಯಾಪ್ತಿಯ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ (ಜಿಲ್ಲಾ ವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ, ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಬಾವಿ ಮಂಜೂರಾತಿಯು ಅವಶ್ಯಕ | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :** ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯು ತುಮಕೂರು ಜಿಲ್ಲೆ, ಬೆಂಗಳೂರು ನಗರ, ಬೆಂ. ಗ್ರಾಮಾಂತರ, ರಾಮನಗರ (ಬೆಂ. ದಕ್ಷಿಣ) ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ಪೂರ್ವಬಾವಿ ಮಂಜೂರಾತಿಯು ಅವಶ್ಯಕ | ಹೆಚ್ಚುವರಿ ಕಾರ್ಯವ್ಯಾಪ್ತಿಯಲ್ಲಿನ ಜೈನ ಸಮುದಾಯ ಹಾಗೂ ಜನ ಸಾಮಾನ್ಯರಿಗೆ ಸದಸ್ಯತ್ವವನ್ನು ನೀಡಿ ಅವರಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸಿ ಆರ್ಥಿಕವಾಗಿ ಅವರನ್ನು ಸದೃಢಪಡಿಸಲು ಮತ್ತು ಬ್ಯಾಂಕಿನ ಷೇರು ಬಂಡವಾಳ ಹೆಚ್ಚಿಸುವ ಸಲುವಾಗಿ |
| 2. | 20 | **ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :** (1) (iii) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಐದು ಇರತಕ್ಕದ್ದು. | **ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:** (1) (iii) ಸದಸ್ಯನು ಕನಿಷ್ಠ ಠೇವಣಿಯೊಂದಿಗೆ ಸಕ್ರಿಯ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿರತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |
| 3. | 47(3) | **ಮತ ನೀಡಿಕೆ :** ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ 30 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; | **ಮತ ನೀಡಿಕೆ :** ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 30 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವಯಾವುದೇತರಹದ ಸುಸ್ತಿ ಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನುಕೊಟ್ಟುಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ 20 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲುತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |
| 4. | 52 | **ಮಂಡಲಿಯ ನಿರ್ದೇಶಕರ ಚುನಾವಣೆ:** (2) ಬ್ಯಾಂಕಿನ ಮಂಡಲಿಯು – (ಬಿ) ಮರಣ, ರಾಜೀನಾಮೆ, ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಅಥವಾ ಪದಾಧಿಕಾರಿಗಳ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಆ ಬಗ್ಗೆ ಕೂಡಲೇ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು (6) ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು | **ಮಂಡಲಿಯ ನಿರ್ದೇಶಕರಚುನಾವಣೆ** (2) ಬ್ಯಾಂಕಿನ ಮಂಡಲಿಯು – (ಬಿ) ಅಳಿಸಲಾಗಿದೆ. (6) ಅಳಿಸಲಾಗಿದೆ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಅಧಿ ನಿಯಮ 1960ರ ದಿನಾಂಕ : 12/09/2025ರ ಅಧಿಸೂಚನೆ ಅನ್ವಯ ತಿದ್ದುಪಡಿ |